ಲಾಯರುಗಳು ಅಪಿಯರ ಆಗಬಾರದು ಎಂದು ಏಕೆ ಹೇಳಿದ್ದೀರಿ? ಈಗ ಸರಕಾರದವರು ದುಡ್ಡು ಕೊಡುತ್ತಾರೆ, ಅದನ್ನು ಕೊಡುವುದರಲ್ಲಿ ನಮಗೆ ಕಷ್ಟ ಇದ್ದರೆ, ನನ್ನ ಪರವಾಗಿ ಜತ್ತಿ ಸಾಹೇಬರೇ, ನಿಮಗೆ ಫೀ ಕೊಡುತ್ತೇನೆ, ಅಪಿಯರ್ ಆಗಿ ಎಂದು ಕೇಳಿಕೊಂಡು ಏಕೆ ಅವರನ್ನು ಎಂಗೇಜ್ ಮಾಡಬಾರದು? ಲಾಯರುಗಳು ಈ ಪ್ರೊಸೀಡಿಂಗಿನಲ್ಲಿ ಹಾಜರಾಗಬಾರದು ಎಂದು ಹೇಳಿರುವುದು ಒಂದು ಅನಾಮಲಿ—ಒಂದು ಕಡೆ ಲಾಯರುಗಳನ್ನು ಇಟ್ಟುಕೊಳ್ಳಬಹುದು, ಇನ್ನೊಂದು ಕಡೆ ಇಟ್ಟುಕೊಳ್ಳಬಾರದು ಎಂದು ನಿಷೇಧಿಸುವುದರಲ್ಲಿ ಏನು ಅರ್ಥ? ಈ ಕಾನೂನಿನ ಹೆಸರು ಅಗ್ರಿಕಲ್ಚರಲ್ ಡೆಟರ್ಸ್ ರಿಲೀಫ್ ಆಕ್ಟ್ ಎಂದು ಇದರಲ್ಲಿ ಲಾಯರುಗಳ ಸಹಾಯವಿಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. Much depends upon the evidence that is adduced. It depends upon their interpretation and the interpretation of the Presiding Officer. ನಾನು ಸಾಲಗಾರ. ನನ್ನ ಆಸ್ತಿ, ನನ್ನ ಹೇಯಿಂಗ್ ಕೆಪ್ಯಾಸಿಟಿ ವ್ಯಾಲ್ಯು ಆಫ್ ದಿ ಪ್ರಾಪರ್ಟಿ ಮುಂತಾದುದರ ಬಗ್ಗೆ ಎಷ್ಟೇಕ್ಟ್ ವೀವಾಗಿ ರೆಪ್ರಸೆಂಟ್ ಮಾಡಬೇಕಾಗುತ್ತದೆ. ಇಷ್ಟೆ ಅಲ್ಲದೆ what are all the other conditions to be taken into consideration ಅನ್ನುವುದನ್ನು ಒತ್ತಾಯ ಮಾಡಬೇಕಾಗುತ್ತದೆ. Unless I adduce evidence that the property adjacent to my land is worth so much and the other property is not valued so much, ಏನೂ ಉಪಯೋಗವಾಗುವುದಿಲ್ಲ. ಹುಣಿಸೆ, ಮಾವು, ಅಡಿಕೆ ತೋಟ, ಬತ್ತ ಅಥವ ಹೊಗೆಸೊಪ್ಪು ಫಸಲಿನ ಬಗ್ಗೆ ಎವಿಡೆನ್ಸ್ ಕೊಡಬೇಕಾಗಿ ಬರಬಹುದು. ಲ್ಯಾಂಡ್ ರಿಫಾರ್ಮ್ಸ್ ಮಸೂದೆಯಲ್ಲಿ ಎ, ಬಿ, ಸಿ, ಡಿ ಎಂದು 4-5 ತರಹವಾಗಿ ಜಮೀನುಗಳನ್ನು ವಿಂಗಡಿಸಿದ್ದಾರೆ. ಅದನ್ನು ಡಿಟರ್‌ಮಿನ್ ಮಾಡಬೇಕಾದರೆ, ಲಾಯರ ಸಹಾಯ ಬೇಕಾಗುತ್ತದೆ. ಹೆರಿನಿಯಲ್ ಸೋರ್ಟ್ಸ್ ಆಫ್ ಪಾಟರ್ ಸಹ್ಯೆ ಇದೆಯೇ, ಬಾವಿಗೆ ಪಂಪುಸೆಟ್ಟು ತೆಗೆದುಕೊಂಡಿದ್ದಾರೆಯೇ, ಆ ಭೂಮಿ ಬತ್ತ ಬೆಳೆಯುವುದಕ್ಕೆ ಯೋಗ್ಯವೆ, ರಾಗಿ ಬೆಳೆಯುವುದಕ್ಕೆ ಯೋಗ್ಯವೆ, ಕಬ್ಬು ಬೆಳೆಯುವುದಕ್ಕೆ ಯೋಗ್ಯವೆ, ಹೊಗೆಸೊಪ್ಪು ಬೆಳೆಯುವುದಕ್ಕೆ ಯೋಗ್ಯವೆ ಮುಂತಾದುದನ್ನು ಕೋರ್ಟಿನಲ್ಲಿ ಹೇಳಬೇಕಾಗುತ್ತದೆ. ಒಂದು ಭೂಮಿ ತುಟ್ಟತುದಿಯಲ್ಲಿ ಇದ್ದರೆ ಅದರ ಬೆಲೆ 4 ಸಾವಿರ ರೂಪಾಯಿ ಇರುತ್ತದೆ. ಅದೇ ಒಂದು ಭೂಮಿ ಮಧ್ಯದಲ್ಲಿ ತೂಬಿನ ಹತ್ತಿರವಿದ್ದರೆ 8 ಸಾವಿರ ರೂಪಾಯಿ ಬಾಳುತ್ತದೆ. ಇದನ್ನು ಡಿಟರ್‌ಮಿನ್ ಮಾಡಬೇಕಾದರೆ ಲಾಯರುಗಳ ಸಹಾಯ ಬೇಡವೆ, ಎವಿಡೆನ್ಸ್ ಸರಿಯಾಗಿ ಕೊಡಬೇಡವೆ? 10 ವರ್ಷದಿಂದ ಏನೇನು ಬೆಳೆ ಇಟ್ಟಿದ್ದೇನೆ, ಆ ಜಮೀನಿನಲ್ಲಿ ಎಷ್ಟು ಬೆಳೆ ಬೆಳೆಯುತ್ತದೆ, ಮಳೆ ಹೇಗೆ ಬಂತು, ಎಂಬುದನ್ನೆಲ್ಲಾ ಹೇಳಲೇಬೇಕಾಗಿ ಬರುತ್ತದೆ. ವ್ಯಾಲು ಆಫ್ ದಿ ಪ್ರಾಪರ್ಟಿ ನಿರ್ಧರಿಸಬೇಕಾದರೆ, ಎಂತಹ ಸಂದರ್ಭದಲ್ಲಿಯೂ, ವಕೀಲರ ಸಹಾಯ ಕಾನೂನನ್ನು ಸರಿಯಾದ ರೀತಿಯಲ್ಲಿ ಇಂಟರ್‌ಪ್ರೆಟ್ ಮಾಡಲು ಬೇಕೆಬೇಕಾಗುತ್ತದೆ. ಲಾಯರುಗಳನ್ನು ಇಟ್ಟುಕೊಳ್ಳಬಾರದು ಎಂದು ಹೇಳತಕ್ಕಂಥ ನಿಮ್ಮ ವಾದ ಒಪ್ಪತಕ್ಕಂಥಾದ್ದಲ್ಲ. ಈ ಕ್ಲಾಜನ್ನು ತಿದ್ದುಪಡಿಮಾಡಬೇಕು.

ಮಾರ್ಕೆಟ್ ವ್ಯಾಲ್ಯು ಆಫ್ ದಿ ಲ್ಯಾಂಡ್ ಅಂತ ತಾವು ಹೇಳುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇವತ್ತು ಒಂದು ಮನೆ ಚಿಕ್ಕಪೇಟೆಯಲ್ಲಿದ್ದು ಹರಾಜು ಹಾಕಬಿಟ್ಟರೆ, ಒಂದು ಲಕ್ಷಕ್ಕೆ ಹೋಗಬಹುದು. ಅಂಥ ಮನೆಯೊಂದು ನಗರ್ತಪೇಟೆ ತುದಿಯಲ್ಲಿದ್ದು, ಅದನ್ನು ಹರಾಜು ಹಾಕಿದರೆ, ಅದಕ್ಕೆ 30-40 ಸಾವಿರ ರೂಪಾಯಿ ಬರಬಹುದು. It all depends upon the location

of the property. ಇವತ್ತಿನ ದಿವಸ ಆ ಸ್ವತ್ತಿನ ಬೆಲೆ ಆಜುಬಾಜುಏನಲ್ಲಿ ಏನಿದೆ ಅನ್ನುವುದನ್ನು ನೋಡಬೇಕು. ಈ ಪ್ರಾಪರ್ಟಿಯ ಬೆಲೆ ನಿರ್ಧರಿಸುವವರು ಕೋರ್ಟಿನವರು—not the Deputy Commissioner, not the State Government. ಇದು ನನಗೆ ಸರಿಯಾಗಿ ಕಾಣುವುದಿಲ್ಲ. ಸರಕಾರದವರು ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

5-00 P.M.

"30. PAYING CAPACITY.—The paying capacity of the debtor, shall, for the purpose of this Act, be deemed to be sixty per cent of the value of all the property of the debtor :"

ಸ್ವಾಮಿ, ಇವತ್ತಿನ ದಿವಸ ಶೇಕಡಾ 60 ರಷ್ಟು ಕೊಡುತ್ತೇವೆ. ಶೇಕಡ 40 ಬಂದಲ್ಲಿ ಶೇಕಡ 60 ಉಳಿಯುತ್ತದೆಂದು ಹೇಳುವುದಾದರೆ ಇಂಥ ಕಾನೂನನ್ನು ಮಾಡಬೇಕಾಗಿಲ್ಲ. Rural Credit Survey Report ಅನ್ನು ನೋಡುವುದಾದರೆ ಈ ಮನೂದೆಯಿಂದ ರೈತನಿಗೆ ಪರಿಹಾರ ಸಿಕ್ಕುವುದಿಲ್ಲ. Paying Capacity ಏನು, ಎಷ್ಟು percent indebtedness ಇದೆ, ಎಂದು ಅವರ ರಿಪೋರ್ಟಿನಲ್ಲಿ ನಮೂದು ಮಾಡಿದ್ದಾರೆ. ತಾವು ಇವತ್ತಿನ ದಿವಸ ಶೇಕಡ ಅರು ಉಳಿಯುತ್ತದೆಂದರೆ ವ್ಯಕ್ತಿಯ ಆದಾಯ ಎಷ್ಟು, *per capita* income ಎಷ್ಟಿರಬೇಕು. ಡಾ॥ ರಾಮ ಮನೋಹರ ಲೋಹಿಯಾ ಅವರು ಒಬ್ಬ ವ್ಯಕ್ತಿಯ ಆದಾಯ ಕೇವಲ ಮೂರಾಣೆ ಎಂದಾಗ ಪ್ಲಾನಿಂಗ್ ಕಮಿಷನ್ ವೈಸ್ ಚೇರ್ಮನ್ ಆದವರೇ 4–5 ಆಣೆ per capita income ಇದೆ ಎಂದು ಹೇಳಿದ್ದಾರೆ. ಆ ರೀತಿ ತಗೆದುಕೊಂಡರೂ ಕೂಡ Rural Credit Survey Report, ಮತ್ತು ಪ್ಲಾನಿಂಗ್ ಕಮಿಷನ್ ಅವರು ಹೇಳುತ್ತಿರುವಂತೆ, ಒಬ್ಬ ಮನುಷ್ಯನ ಆದಾಯ—ಇವನ್ನು ಗಣನೆಗೆ ತೆಗೆದುಕೊಂಡರೆ ನಮ್ಮ indebtedness ಕಡಮೆ ಮಾಡಿಕೊಳ್ಳುವುದಕ್ಕೆ ಇಷ್ಟು ಆದಾಯ ಒಂದು ತಲೆಗೆ ಸಾಕೇ ? ಇದರಿಂದ ನಮ್ಮ ರೈತರ ಸಾಲಸೋಲಗಳು ತೀರುತ್ತವೆಯೇ ? ಬಹಳ ಭಯಂಕರವಾದ ಪರಿಸ್ಥಿತಿ ಇದೆ. ತಾವು paying capacity determine ಮಾಡಬೇಕೆಂದು ಹೊರಟಿರುವುದಕ್ಕೆ ಏನೂ ಅರ್ಥವಿಲ್ಲ.

"Provided that, when any portion of such property yields income, but the market value of such portion cannot be determined, the value of such portion shall be the amount of the income capitalised at six per cent per annum."

ಇದೇನು ಸ್ವಾಮಿ ? ಈ ಖಾತೆಯ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಇಬ್ಬರೂ ರಾಯರುಗಳು. ನಾನು ನಿಮ್ಮಂಥವರ ಜೊತೆಯಲ್ಲಿ ಓಡಾಡಿಕೊಂಡು, ಕಾನೂನಿನ ವಿಷಯ ತಿಳಿಯದೆ ಇದ್ದರೂ ಅದರಿಂದ ಏನು ಅನ್ಯಾಯವಾಗುತ್ತದೆಂದು ತಿಳಿಯುವಷ್ಟು commonsense ಇದೆ. ಈ ಪ್ರಾಪಸೋ ಇಲ್ಲಿ ಹಾಕಿದ್ದೀರಿ. ಇದರ ಅರ್ಥವಾದರೂ ಏನು ?

ತಾವು ಯಾವ ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಈ ಮನೂದೆಯನ್ನು ತಂದಿದ್ದೀರೋ ಅದು ಖಂಡಿತ ಸಾಧನೆಯಾಗುವುದಿಲ್ಲ. ಬಡವರಿಗೆ ಏನೂ ಅನುಕೂಲವಾಗುವುದಿಲ್ಲ. ಅದಕ್ಕೋಸ್ಕರ ಇದನ್ನು ಈಗಾಗಲೇ ಕೆಲವು ಸದಸ್ಯರು ಸೂಚಿಸಿದ ಹಾಗೆ ಇದನ್ನ ಸೆರೆಕ್ಟ್ ಕಮಿಟಿಗೆ ಕಳಿಸಬೇಕು. ಇವತ್ತೇ ಇದನ್ನು ಪಾಸಾಗೆ ತರದೇ ಇದ್ದರೂ ಚಿಂತೆಯಿಲ್ಲ, ಇದು ಪಾರಿಗೆ ಬಂದಾಗ ರೈತನಿಗೆ, ಸಹಾಯವಾಗುವಂತೆ ಕೂಲಂಕಷವಾಗಿ ಪರ್ಯಾಲೋಚಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಕ್ಲಾಜ್ 28 ರಲ್ಲಿ fraudulent alienation or encumbrances void ಎಂದು ಹೇಳಿದ್ದಾರೆ. ಇವತ್ತಿನ ದಿವಸ ಸೊಸ್ಯೆಟಿಗಳು ಮಾನ್ಯ ಮಂತ್ರಿಗಳ ಕೈಯಲ್ಲಿವೆ. ಈ ಸೊಸ್ಯೆಟಿಗಳಲ್ಲಿ ಮೂರು ಆಧಾರ, ನಾಲ್ಕು ಭೋಗ್ಯ ಮಾಡಿರತಕ್ಕ ಆಸ್ತಿಗಳನ್ನು ಆಧಾರ ಮಾಡಿ ಸಾಲ ಪಡೆದಿರುತ್ತಾರೆ. ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ತುಮಕೂರು ಸೆಂಟ್ರಲ್ ಬ್ಯಾಂಕಿನಲ್ಲಿ ಯಾರದೋ ಆಸ್ತಿಯನ್ನು ಎಂದರೆ ಆಸ್ತಿ ಒಬ್ಬರ ಹೆಸರಿನಲ್ಲಿದ್ದು title ಒಬ್ಬರ ಹೆಸರಿನಲ್ಲಿ ಇರುವುದನ್ನು ಬೇರೊಬ್ಬರು ಆಧಾರ ಮಾಡಿಕೊಟ್ಟು ಸಾಲ ಪಡೆದಿರುತ್ತಾರೆ. ಈ ದುಡ್ಡಿಗೆ ಯಾರು ಜವಾಬ್ದಾರರು ? Is it not a fraudulent alienation ? ಈ ತರಹ ಅನೇಕ ವಿಚಾರಗಳಿರುವುದರಿಂದ, fraudulent alienation or encumbrances void ಎನ್ನುವ ಕಡೆ ನ್ಯೂ ಸ್ವಲ್ಪ ಕಠಿಣವಾಗಿ ವಿವರಣೆ ಇಟ್ಟು, ಸರಿಯಾದ ರಿಕಾರ್ಡ್ ಇದ್ದಲ್ಲಿ ಏನೂ ತಪ್ಪಾಗುವುದಿಲ್ಲವೆಂದು ನಾನು ತಮ್ಮಲ್ಲಿ ಹೇಳುತ್ತಿದ್ದೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕ್ಲಾಜ್ 31 : Debts payable by debtors to be scaled down —Notwithstanding any law, custom, contract, award or decree of a Court to the contrary, the amounts found due under section 22 from a debtor, shall be further scaled down in the manner hereinafter provided."

ಏಕೆ ಸ್ವಾಮಿ, ಇಬ್ಬರೂ ಒಪ್ಪಬೇಕು ? ಸಾವಿರ ರೂಪಾಯಿ ಆಸ್ತಿ ಇರುತ್ತದೆ, ನಾಲ್ಕು ಸಾವಿರ ರೂಪಾಯಿ ಸಾಲವಿದೆ ಎಂದು ಇಟ್ಟುಕೊಳ್ಳೋಣ. Either the debtor will go to the Court or the Creditors will come before the Court and file an application to declare the party as insolvent.

ಇದನ್ನು scaledown ಮಾಡುವುದಕ್ಕೆ ನಿಮಗೆ ಏನು ಅಧಿಕಾರವಿದೆ ? ನೀವು ಇಲ್ಲಿ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ. ಈ ಅಧಿಕಾರವನ್ನು ತೆಗೆದುಕೊಂಡು "If all the debts found due by a debtor after taking accounts under section 22 are unsecured, such debts shall be further scaled down *pro rata* to the paying capacity of the debtor".

ಈ ರೀತಿ scale down ಮಾಡಿದ್ದಕ್ಕೆ ಒಬ್ಬರು ಒಪ್ಪಿ ಕ್ರೆಡಿಟರುಗಳು ಒಪ್ಪದಿಹೋದರೆ ಹೇಗೆ ಮಾಡುತ್ತೀರಿ ? ಕೋರ್ಟ್ ಮಾಡಬೇಕು ಎಂದರೆ ಕೋರ್ಟ್ ಎಷ್ಟು ದೂರ ಹೋಗುತ್ತದೆ ? ಹಾಗಾದರೆ ಇವನು ಸಾಲ ಮಾಡಿ ನನ್ನ ಹತ್ತಿರ ಇರುವುದು ಇಷ್ಟೇ ಎಂದು hands up ಮಾಡಿದರೆ ಸಾಲ ಕೊಟ್ಟವನು ದಡ್ಡನೇ ? ನೂರು ರೂಪಾಯಿ ಸಾಲ ಕೊಟ್ಟು ನೂರು ರೂಪಾಯಿ ಬಡ್ಡಿ ತೆದು ಕೊಂಡು, ನೂರು ರೂಪಾಯಿ ಬಡ್ಡಿ ಮತ್ತು ನೂರು ರೂಪಾಯಿ ಅಸಲಿಗೆ ದಾವೆ ನಡೆದಿದೆ ಎಂದರೆ ಕೋರ್ಟಿನಲ್ಲಿ cent percent ಬಡ್ಡಿ ತೆಗೆದುಕೊಂಡಿದ್ದಾನೆಂದು ಅಷ್ಟು strike down ಮಾಡುವುದಕ್ಕೆ ಸಾಧ್ಯ, ಇಲ್ಲದೆ ಹೋದರೆ ಇದು ಸಾಧ್ಯವಾಗುವುದಿಲ್ಲ. ಇದು ನನ್ನ ಸ್ವಂತ ಅನುಭವ, practical experience 32(2) ರಲ್ಲಿ ಏನು ಸೂತ್ರವನ್ನು ಹೇಳಿದ್ದೀರಿ ಅದನ್ನು ಮುನ್ಸೀಫ್ ಕೋರ್ಟಿನಲ್ಲಿ ಒಪ್ಪಿದರೆ ಅದರಮೇಲೆ ಸುಪ್ರೀಂ ಕೋರ್ಟಿನವರೆಗೂ ಅಪೀಲು ಹೋಗುತ್ತಾನೆ. ಹೀಗಾದರೆ ರೈತನಿಗೆ ಇದರಿಂದ ಏನಾದರೂ ಪರಿಹಾರ ಸಿಕ್ಕಿದಂತಾಯಿತೇ ? ಇದು ಬಹಳ ಸರಳವಾಗಿರಬೇಕು. ಸಾಲಗಾರನನ್ನು ಅದರ ಹೊಡೆತದಿಂದ ಬಿಡಿಸಬೇಕು, ಅವನು ತಾಯಿ ತಂದೆಯ ಮಗನಾಗಿ ರಾಜ್ಯದಲ್ಲಿ ಬದುಕಬೇಕು. ಅದಕ್ಕೋಸ್ಕರ ಒಂದು ಸರಳವಾದ ಕಾನೂನನ್ನು ಮಾಡಬೇಕೇ ಹೊರತಾಗಿ ಈಗಿರತಕ್ಕ ಕಾನೂನಿನಿಂದ ಏನೂ ಉಪಯೋಗವಾಗುವುದಿಲ್ಲ, ಎಂದು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

" Debtor" means—

(*a*) an individual—

(i) who is indebted ;

(ii) who holds land used for agricultural purposes or has held such land at any time not more than thirty years before 0th January 1940, which land has been transferred, whether under any instrument or not, and which transfer is in the nature of a mortgage, although not purporting to be so ;"

ಇದು ಎಂಥದ್ದು, ಇದರ ಅರ್ಥವನ್ನು ನನಗೆ ಸ್ವಲ್ಪ ಹೇಳಿಕೊಡಬೇಕು ಕ್ಲಾಜ್ 2(5) (*a*) (ii) ತಾವು ಸ್ವಲ್ಪ ಓದಿನೋಡಿ. ನನಗೇನೋ ಇದರ ಅರ್ಥವಾಗುವುದಿಲ್ಲ. ಇದರ ಅರ್ಥ ಏನು ಎಂಬ ದೇ ಗೊತ್ತಾಗಿಲ್ಲ.

ಇದು ಸಿಂಪಲ್ ಮಾರ್ಟ್‌ಗೇಜ್ ಎಂದು ಇರಬೇಕು. ಇಲ್ಲವೆ ಮಾರ್ಟ್‌ಗೇಜ್ ವಿಥ್ ಪೊಜೆಷನ್ ಎಂದು ಆದರೂ ಇರಬೇಕು. ಇದನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಇಲ್ಲದಿದ್ದರೆ ಇದು ಹೇಗೆ ಆಗುತ್ತದೆ ? ಕ್ರಯ ಮಾಡಿ ಜಮೀನು ಬಿಟ್ಟು ಬಿಡುತ್ತಾನೆ ಎಂದು ಇರುತ್ತದೆ. ಇದು ಸೇಲ್ ಡೀಡ್ ಆಗುತ್ತದೆಯೇ ? ಇದರ ಅರ್ಥ ಸ್ಪಷ್ಟವಾಗುವುದಿಲ್ಲ. ಮಕರ ಸುತ್ತಿದ ನಗ್ನ ಎಂದು ಹೇಳುವ ಹಾಗೆ ಎಲ್ಲವೂ ಕನ್‌ಫ್ಯೂಜ್ಡ್ ಆಗಿದೆ. ಶ್ರೀಮಾನ್ ಜತ್ತಿ ಸಾಹೇಬರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಮಾತು ಹೇಳಿದ್ದರು. ಇದು ಬೊಂಬಾಯಿ ರಾಜ್ಯದಲ್ಲಿ ಬಹಳ ಉಪಕಾರ

ಮಾಡಿದೆ ಎಂದು ಹೇಳಿದ್ದಾರೆ. 5(ಎ)(2) ನಲ್ಲಿರುವ ಡೆಫಿನಿಷನ್ ನನಗೆ ಅರ್ಥವಾಗುವುದಿಲ್ಲ. ಅದನ್ನು ಸರಿಯಾಗಿ ತಿಳಿಸುವ ಹಾಗೆ ಸರಕಾರ ತಿಳ್ಸುವಳಿಕೆ ಕೊಡಬೇಕು ಎಂದು ನಾನು ಹೇಳುತ್ತೇನೆ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಪರ್ಸನಲ್ ಕಲ್ಟಿವೇಶನ್ ಎಂಬುದಕ್ಕೆ ಅರ್ಥ ಇಟ್ಟಿದ್ದಾರೆ.

In this Bill, "to cultivate personally" means to cultivate by one's own labour or by the labour of any member of one's family or by hired labour, or by servants on wages payable in cash or kind but not in crop share, under the personal supervision of one's self or any member of one's family.

ಇಲ್ಲ ಇದಕ್ಕೆ ಏನು ಹೇಳುತ್ತೀರಿ ?

Personally that boy is a minor. His father has left him in the lurch. Is he cultivator according to this Act or is it the same minor boy according to the Land Reforms Act ?

ನನಗಂತೂ ಇದರ ಅರ್ಥವಾಗುವುದಿಲ್ಲ. 5(3) ರಲ್ಲಿ ಏನು ಇದೆಯೋ ಅದನ್ನು ಸ್ವಲ್ಪ ನೋಡ ಬೇಕು.

2(5) (iii) who has been cultivating land personally for the cultivating seasons in the two years immediately preceding the date of the coming into operation of this Act ;

(iv) whose annual income from sources other than agricultural and manual labour does not exceed one-third of his total annual income or Rs. 1,000 whichever is greater, and whose aggregate annual ಸಿವಿರ್ ಜಡ್ಜ್ ಕೋರ್ಟ್ ಮುನ್ಸೀಫ್ ಕೋರ್ಟ್ ಜ್ಯುರಿಸ್‌ಡಿಕ್ಷನ್ ಬರುವುದಕ್ಕೆ 5,000 ಇಟ್ಟಿದ್ದೀರಿ.

Income from all sources does not exceed Rs. 5,000."

"Court" means a Court of Munsiff or Subordinate Judge, Civil Judge Mysore, etc."

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಇಂದು ಬೆಂಗಳೂರು ನಗರದಲ್ಲಿ ಬಸ್ ಕಾರ್ಮಿಕರು ಸಂಪು ಮಾಡಿರುವುದರಿಂದ ನಗರದಲ್ಲಿ ಬಸ್ ಸಂಪರ್ಕ ನಿಂತು ಹೋಗಿದೆ. ನರಿಯಾಗಿ ಮನೆಗೆ ವಾಪಸ್ ಹೋಗುವುದು ಸಾಧ್ಯವಿಲ್ಲ. ಅದರಲ್ಲಿಯೂ ಇಂದು ಸಂಜೆ ವೇಳೆಯಲ್ಲಿ ವಿಪರೀತ ಮಳೆ ಬೀಳುತ್ತಿದೆ. ಆದುದರಿಂದ ಸರಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಏನಾದರೂ ಒಂದು ವ್ಯವಸ್ಥೆ ಮಾಡಬೇಕಾಗಿ ನಮ್ಮ ಮುಖೇನ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—5,000 ರೂಪಾಯಿಬರಬೇಕಾದರೆ 1,000 ರೂಪಾಯಿ ಲೇಬರ್ ಚಾರ್ಜಸ್ ಎಂದು ಇಟ್ಟಿದ್ದೀರಿ. ಆದರೆ 2,500 ದಿಂದ 3,000 ರೂಪಾಯಿವರೆಗೆ ಖರ್ಚಾಗುತ್ತದೆ. ಶ್ರೀಮಾನ್ ಕೃಷ್ಣಪ್ಪನವರು ಹಿಂದೆ ಒಂದು ಸಾರಿ ಹೇಳಿದ್ದಾರೆ. ಒಂದು ಎಕರೆ ಜಮೀನಿನಲ್ಲಿ ರಾಗಿ ಬೆಳೆಯಲು 484 ರೂಪಾಯಿ ಖರ್ಚಾಗುತ್ತದೆ ಎಂದು. 5,000 ರೂಪಾಯಿ ಸಂಪಾದನೆ ಮಾಡ ಬೇಕಾದರೆ 1,000 ರೂಪಾಯಿ ಅಗ್ರಿಕಲ್ಚರಲ್ ಲೇಬರ್ ಎಂದು ಹಾಕುವುದು ಸರಿಯಾಗಿ ಕಾಣುವು ದಿಲ್ಲ. ಆದುದರಿಂದ ಸರಕಾರ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ಮಸೂದೆ ಜರ್ಚಿಗೆ ಇದನ್ನು 45 ನಿಮಿಷ ಮಾತ್ರ ಕಾಲ ಉಳಿದಿದೆ. ಹೆಚ್ಚಿಗೆ ಹೇಳುವುದಕ್ಕೆ ಅವಕಾಶವಿಲ್ಲ. ಈ ಮಸೂದೆಯನ್ನು ಪರಿಶೀಲನೆ ಮಾಡುದಕ್ಕೋಸ್ಕರ ಸೆಲೆಕ್ಟ್ ಕಮಿಟಿಗೆ ಕಳಿಸುತ್ತೀರಿ ಎಂದು ಹೇಳಿದರೆ ನನ್ನ ವಾದ ನಾನು ಇಲ್ಲಗೇ ಮುಗಿಸುತ್ತೇನೆ. ಇದು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಸೆಲೆಕ್ಟ್ ಕಮಿಟಿಯವರು ಈ ಮಸೂದೆಯನ್ನು ಪೂರ್ಣ ವಿಮರ್ಶೆ ಮಾಡಿ ಅವಶ್ಯವಿರುವ ಎಲ್ಲ ತಿದ್ದುಪಡಿಗಳನ್ನು ಮಾಡಿ ಪರಿಪ್ಯೂರ್ತ ವಾದ ನಂತರ ಈ ಮಸೂದೆಯನ್ನು ಸಭೆಯ ಮುಂದೆ ತಂದು ಪಾಸ್ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

Sri RAMAKRISHNA HEGDE.—Several Hon'ble Members have suggested that this Bill may be referred to a Select Committee. I am inclined to accept the suggestion. Therefore, may I suggest to Hon'ble Members that unnecessary time need not be taken on this Bill at this juncture because this is going to be referred to a Select Committee.

Sri D. PARAMESWARAPPA.—We cannot accept his suggestion Sir, because many of the Members have got to express their opinion and the Select Committe will have take into consideration those opinions. Therefore in order to assist the Members of the Select Committee, it is better that the Hon'ble Members are allowed to express their views in this House.

[MR. DEPUTY SPEAKER in the Chair.]

ಶ್ರೀ ಸಿ. ಎಸ್. ಹುಲಕೋಟಿ (ಮುಂಡರಗಿ).—ಸ್ವಾಮಿ, ಈ ಮಸೂದೆ ಮೇಲೆ ಈಗಾಗಲೇ ಕೆಲವು ಮಿತ್ರರು ಮಾತನಾಡಿದ್ದಾರೆ ಮತ್ತು ಕೆಲವು ಸೂಚನೆಗಳನ್ನು ಸಹ ಮಾಡಿದ್ದಾರೆ. ಈ ಬಿಲ್ಲಿನ ಮೂಲ ಉದ್ದೇಶ ಇಷ್ಟೇ ಎಂದು ಕಾಣಿಸುತ್ತದೆ. ಒಡ ರೈತರಿಗೆ ಸಾವುಕಾರರು ಏನು ಕಾಟ ಕೊಡುತ್ತಾರೆಯೋ ಅದನ್ನು ತಪ್ಪಿಸುವುದು ಮತ್ತು ಬಡ ರೈತರಿಗೆ ಸಹಾಯ ಮಾಡಬೇಕು ಎಂದು ಈ ಮಸೂದೆಯನ್ನು ಸರಕಾರದವರು ತಂದಿದ್ದಾರೆ ಎಂದು ಅನಿಸುತ್ತದೆ. ಮೊದಲು ಮುಂಬಯಿ ಕರ್ನಾಟಕದಲ್ಲಿ 1879 ನೇ ಇಸವಿಯಲ್ಲಿ ಡೆಕ್ಕನ್ ಅಗ್ರಿಕಲ್ಚರರ್ ರಿಲೀಫ್ ಆಕ್ಟ್ ಜಾರಿಗೆ ತಂದಿದ್ದರು. ಈ ಬಿಲ್ಲು ತರಲಿಕ್ಕೆ ಕಾರಣ ಏನಾಯಿತು ಎಂದರೆ 1875-76 ರಲ್ಲಿ ಬಹುತೇಕ ವ್ಯವಸಾಯ ಮಾಡತಕ್ಕ ರೈತರಿಗೆ ಸಾವುಕಾರರು ಒಂದು ನೂರು ರೂಪಾಯಿ ಕೊಟ್ಟು ಮೂರು ನಾಲ್ಕು ಕೂರಿಗೆ ಭೂಮಿಯನ್ನು ಬರೆಯಿಸಿಕೊಂಡು ಸ್ವಾಧೀನ ಪಡೆಯಲು ಪ್ರಯತ್ನ ಮಾಡಿದರು. ಆಗಿನ ಮುಂಬಯಿ ರಾಜ್ಯದಲ್ಲಿ ಅಹಮ್ಮದನಗರ ಬಳಗಾಂವ ಸೊಲ್ಹಾಪುರ ಸರ್ಕಾರ ಮುಂತಾದ ಹನ್ನೊಂದು, ಜಿಲ್ಲೆಗಳಲ್ಲಿ ಇದನ್ನು ತಪ್ಪಿಸಲಿಕ್ಕೆ ಮತ್ತು ರೈತರಿಗೆ ಸಹಾಯ ಮಾಡುವುದಕ್ಕೆ ಈ ಕಾನೂನು ತರಬೇಕಾಯಿತು—ಆ ಕಾನೂನು ಪ್ರಕಾರ ಹಿಂದಿನ ಬಡ್ಡಿ ವ್ಯವಹಾರ ಇದ್ದರೆ ಬಡ್ಡಿ ದರ ಕಡಿಮೆ ಮಾಡಬೇಕೆಂಬ ಉದ್ದೇಶವಿತ್ತು. ಸೋವಿ ಬಡ್ಡಿ ದರ ಕೊಟ್ಟು ಕಂತು ಕಂತುಗಳಲ್ಲಿ ಹಣ ಕೊಡುವುದಕ್ಕೆ ಸಹಾಯ ಮಾಡನಬೇಕೆಂಬ ಉದ್ದೇಶ ಇದ್ದಿತು. 1875-76 ರಲ್ಲಿ ಒಂದು ನೂರು ರೂಪಾಯಿ ಸಾಲ ಕೊಟ್ಟು ಜಮೀನುವತ್ತೀ ತೆಗೆದುಕೊಂಡು ಖರೀದಿ ರೂಪದಲ್ಲಿ ಕಾಗದ ಬರೆಸಿ ಕೊಂಡಿದ್ದರಿಂದ ಅಂಥ ವ್ಯವಹಾರ ಕೋರ್ಟಿನಲ್ಲಿ ಕೇಳಲಿಕ್ಕೆ ಆಗುತ್ತಿರಲಿಲ್ಲ. ಎವಿಡೆನ್ಸ್ ಆಕ್ಟ್ ಪ್ರಕಾರ ಈ ವಿಷಯ ಕೋರ್ಟಿನಲ್ಲಿ ತೋಂಡಿ ಪುರಾವೆ ಎಂದು ಹೇಳಲಿಕ್ಕೆ ಸಾಧ್ಯವಿರಲಿಲ್ಲ. 10 (ಎ) ಡೆಕ್ಕನ್ ಅಗ್ರಿಕಲ್ಚರರ್ ರಿಲೀಫ್ ಆಕ್ಟ್‌ನಲ್ಲಿ ಇದು ಇದೆ.

ನಿಜವಾಗಿಯೂ ಖರೀದಿ ಪತ್ರ ಇದ್ದರೂ ಕೂಡ ಅದು ವತ್ತಿ ವ್ಯವಹಾರ ಎಂದರೆ ಅದನ್ನು ಸರಿಪಡಿಸಲಿಕ್ಕೆ, ಅಥವಾ ಸಿದ್ಧಪಡಿಲಿಕ್ಕೆ ಅವಕಾಶವಿರಬೇಕು. 1939 ರ ತನಕ ಆ ಕಾಯಿದೆಯಿಂದ ಜನರಿಗೆ ಒಂದು ಅವಕಾಶವಿತ್ತು, ಕೆಲಕೆಲವುಜನರುತಮ್ಮವ್ಯವಹಾರವನ್ನುಕೋರ್ಟಿನೊಳಗೇ ಆ ಪ್ರಕಾರ ವಾದ ಮಾಡಿಕೊಂಡು ಬಂದರು. 1939 ನೇ ಇಸವಿಯಲ್ಲಿ ಮುಂಬಯಿ ರಾಜ್ಯದಲ್ಲಿ ಅಗ್ರಿಕರ್ಚರರ್ ಡೆಟರ್ಸ್ ಆಕ್ಟ್ ಪಾಸ್ ಆಯಿತು. ಅದರ ಮೂಲ ಉದ್ದೇಶ ಇಷ್ಟೇ ಇತ್ತು. 1927-28 ರಿಂದ 1936-37 ರ ವರೆಗೆ ಒಕ್ಕಲುತನದ ಹುಟ್ಟುವಳಿ ಕಡಿಮೆ ಆಯಿತು. ಜನರು ಒಕ್ಕಲುತನವನ್ನು ನಡೆಸುವುದು ಕಷ್ಟವಾಯಿತು. ಆಗ ಜನರು ತಮ್ಮ ಜಮೀನುಗಳನ್ನು ಖರೀದಿ ಕಾಗದ ಅಂತ ಮಾಡಿಕೊಟ್ಟು ಹಣ ಪಡೆಯುತ್ತಿದ್ದರು, ನಿಜವಾಗಿಯೂ ಅದು ವತ್ತಿ ಆಗಿರುತ್ತಿತ್ತು. ಅಲ್ಲದೇ ಬರೀ ಕಾಗದದ ಒಳಗೆ ಒಂದು ರೂಪಾಯಿ ಬಡ್ಡಿ ಎಂದು ಕಾಣಿಸಿದ್ದರೂ ಕೂಡ ಎರಡು ಮೂರು ರೂಪಾಯಿ ಬಡ್ಡಿ ದರ ತೆಗೆದುಕೊಳ್ಳುವಂಥ ಪದ್ಧತಿ ಇತ್ತು. ಆದ್ದರಿಂದ ಅಂತಹ ವ್ಯವಹಾರಗಳನ್ನು ತಪ್ಪಿಸುವುದಕ್ಕೆ 1939 ನೇ ಇಸವಿಯಲ್ಲಿ ಅಗ್ರಿಕಲ್ಚರರ್ ಡೆಟರ್ಸ್ ರಿಲೀಫ್ ಆಕ್ಟ್ ಬಂತು. ಅದು ಆದ ನಂತರ ಮುಂಬೈ ರಾಜ್ಯದೊಳಗೆ ಡೆಟ್ ಕನ್ಸಿಲಿಯೇಷನ್ ಬೋರ್ಡ್ ಎಂಬುದು ಸ್ಥಾಪನೆಯಾಯಿತು. ಅಗ್ರಿಕರ್ಚರರ್ ಡೆಟರ್ಸ್ ಆಕ್ಟ್ ಸೆಕ್ಷನ್ 10 ರ ಪ್ರಕಾರ ಖರೀದಿ ವ್ಯವಹಾರ ಕಾಗದ ಇದ್ದರೂ ಸಹಿತ ವತ್ತಿ ಎಂದು ನಿರ್ಣಯ ಮಾಡಲಿಕ್ಕೆ ಅದರಲ್ಲಿ ಅವಕಾಶವಿತ್ತು. ಇದರಿಂದ ಸಾವುಗಾರರು ತಮ್ಮ ಹಣ ಹಿಂದಿರುಗಿ ಕೊಡುವಾಗ ಬಡ್ಡಿ ದರ ಕಡಿಮೆ ದರದಂತೆ ಕೊಡುವುದಕ್ಕೂ ಮತ್ತು ಕಂತುಗಳಲ್ಲಿ ಕೊಡುವುದಕ್ಕೂ ಅನುಕೂಲವಾಯಿತು. ಖರೀದಿ ಪತ್ರ ಆಗಿ ನಿಜವಾಗಿಯೂ ಖರೀದಿ ವ್ಯವಹಾರ ಎಂದು ಮಾಡಿಕೊಂಡಿದ್ದರೂ ಸಹಿತ ವತ್ತಿ ವ್ಯವಹಾರ ಎಂದು ಮಾಡಿರತಕ್ಕ ಅನೇಕ ನಂದರ್ಭಗಳು ಇದ್ದವು. ನನಗೆ ಗೊತ್ತಿರುವ ಹಾಗೆ ನೂರಕ್ಕೆ 98,99 ವತ್ತಿವ್ಯವಹಾರ ಅಲ್ಲದೇ ಹೈಕೋರ್ಟಿನ ವರೆಗೂ ಹೋಗಿ ಜನರಿಗೆ ಲುಕ್ಸಾನು ಆಯಿತು. ಆದ್ದರಿಂದ ತಾವು ಒಂದು ಬೋರ್ಡ್ ರಚನೆ ಮಾಡಿದ್ದೇ ಆದರೆ ಅವರು ಈ ಕೆಲವು ವಿಷಯಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. 1947 ನೇ ಇಸವಿಯಲ್ಲಿ ಬೊಂಬಾಯಿ ಅಗ್ರಿಕಲ್ಚರರ್ ಡೆಟರ್ಸ್ ರಿಲೀಫ್ ಆಕ್ಟ್ ಎಂಬುದಾಗಿ ಮತ್ತೊಂದು ಆಕ್ಟ್ ಪಾಸ್ ಆಯಿತು. ಅದರ ಉದ್ದೇಶವೇನೆಂದರೆ ಅವರಿಗೆ ಕೆಲವ ಅವಧಿಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

ಈ ಬಿಲ್‌ನಲ್ಲಿರತಕ್ಕ ಕೆಲವು ಕಲಂಗಳು ಅದರೊಳಗೆ ಇತ್ತು, ಅದನ್ನೇ ಅನುಸರಿಸಿ ಈಗ ತಾವು ಇದನ್ನು ತಂದಿರುವ ಹಾಗೆ ಕಾಣುತ್ತದೆ. ಅದರಲ್ಲಿ ಒಂದು ಕಲಂ ಯಾರು ಕೊಟ್ಟ ಅವಧಿಯೊಳಗೆ ಆರ್ಜಿ ಹಾಕಲಿಲ್ಲ ಅವರ ಡೆಟ್ಟು it is deemed to have been extinguished ಅಂತ ಇತ್ತು, ಅದೇ ಪ್ರಕಾರ ಈ ಆಕ್ಟ್‌ನ 16 ನೇ ಕಲಂ ನಲ್ಲಿ ಅರ್ಜಿ ಮಾಡಲಿಕ್ಕೆ ಅವಧಿ ಕೊಟ್ಟಿದ್ದೀರಿ, ಆ ಅವಧಿ ಒಳಗೆ ಸಾಲಗಾರರು ಅರ್ಜಿ ಮಾಡದಿದ್ದರೆ ಅವರಿಗೆ ಯಾವ ಹಣವೂ ಸಿಕ್ಕತಕ್ಕದ್ದಲ್ಲ ಎಂದು ಇದೆ. ಸೆಕ್ಷನ್ 4 ರ ಪ್ರಕಾರ ಬೊಂಬಾಯಿ ಕರ್ನಾಟಕದೊಳಗೆ 1947 ನೆ ಇಸವಿ ಪೂರ್ವದಲ್ಲಿ ಆದ ವ್ಯವಹಾರಗಳಿಗೆ ಇದು ಅನ್ವಯಿಸುವುದಿಲ್ಲ ಎಂದು ಹೇಳಿದ್ದೀರಿ, ಇದರ ಪರಿಣಾಮ ಏನಾಗುತ್ತದೆ ಎಂದರೆ ಹಿಂದೆ ಒಮ್ಮೆ ಸಾಕಾಡಷ್ಟು ಜನರು ಲುಕ್ಸಾನು ಹೊಂದಿದ್ದಾರೆ, ಈಗ ಪುನಃ ಕೋರ್ಟಿಗೆ ಹೋಗಿ ವ್ಯವಹಾರ ತೀರ್ಮಾನ ಮಾಡಿಕೊಳ್ಳಬೇಕೆಂದರೆ ಬಡ ರೈತರು ಕೋರ್ಟಿನ ವ್ಯವಹಾರಕ್ಕೆ ಬಿದ್ದು ಅವರಿಗೆ ಲುಕ್ಸಾನಾಗುತ್ತದೆಯೇ ಹೊರತು ಹೆಚ್ಚಿನ ಲಾಭವಾಗುವುದಿಲ್ಲ ಆದ್ದರಿಂದ ಇಲ್ಲಿರತಕ್ಕ ಅನೇಕ ಕಲಂಗಳಲ್ಲಿ ಕೆಲವು ತೊಡಕುಗಳು ಇವೆ. ಸ್ಕೇಲ್ ಡೌನ್ ಮಾಡುವುದು, ರೇಟ್ ಆಫ್ ಇಂಟರೆಸ್ಟ್, ಯಾವ ರೀತಿ ರಿವಿಜನ್ ಮಾಡಬೇಕು ಎಂಬ ಅನೇಕ ವಿಷಯುಗಳು ಇವೆ, ಆದ್ದರಿಂದ ಈ ಬಿಲ್ಲು ನೋಡಲಿಕ್ಕೆ ಎಷ್ಟೇ ಸಧಾರಣವಾಗಿದ್ದರು ಕೂಡ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾದ್ದು ಬಹಳ ಅವಶ್ಯಕವಾದುದರಿಂದ ಇದನ್ನು ಮಾನ್ಯ ಮಂತ್ರಿಗಳು ಸೆಲೆಕ್ಟ್ ಕಮಿಟಿಗೆ ಹಾಕುವುದು ಬಹಳ ಯೋಗ್ಯ ಎಂದು ನಲಹೆ ಮಾಡುತ್ತೇನೆ.

ಶ್ರೀಮಾನ್ ಮುಕ್ಕಣ್ಣಪ್ಪನವರು ವಕೀಲರನ್ನು ನೇಮಕ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ, ಇದರಿಂದ ಅಜ್ಞಾನಿಗಳಾಗಿರತಕ್ಕ ರೈತರಿಗೆ ಅನ್ಯಾಯವಾಗುತ್ತದೆ, ತೊಂದರೆಯಾಗುತ್ತದೆ ಎಂದು ಹೇಳಿದರು. ಹಿಂದೆ ನಮ್ಮ ಭಾಗದಲ್ಲಿದ್ದ ಆಕ್ಟ್‌ನಲ್ಲೂ ಸಹಿತ ಹೀಗೆ ಇತ್ತು. ಆಗ ಏನು ಮಾಡುತ್ತಾ ಇದ್ದರು ಎಂದರೆ ಪವರ್ ಆಫ್ ಅಟಾರ್ನಿ ಅಂತ ಹೇಳಿ ಅವರ ಪರವಾಗಿ ವಾದ ಮಾಡುಲಿಕ್ಕೆ ಇನ್ನೊಬ್ಬರನ್ನು ಕಳುಹಿಸುತ್ತಿದ್ದರು. ವಕೀಲರು ಎನ್ನುವುದಕ್ಕೆ ಬದಲಾಗಿ ಪವರ್ ಆಫ್ ಅಟಾರ್ನಿ ಎಂದು ಹೇಳಿ ಆ ಮೂಲಕ ವಾದ ಮಾಡುವುದಕ್ಕೆ ಬರುತ್ತಿತ್ತು. ಇದನ್ನೂ ಸಹಿತ ವಿಚಾರ ಮಾಡಬೇಕಾದ ಒಂದು ಅಂಶವಾಗಿದೆ ?

ಡೆಟರ್ ಡೆಫನಿಷನ್ ಒಳಗೆ ತೋರುವತ್ತಿನೇ ಅಥವಾ ಕಬ್ಜಾ ವತ್ತಿನೇ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ, ಆದ್ದರಿಂದ ಅನೇಕ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿರುವುದರಿಂದ ಸರ್ಕಾರದವರು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಆಲಿಸಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ನಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†Sri D. PARAMESWARAPPA.—Mr. Speaker, Sir, the idea underlying this Bill appears to be laudable. Before discussing this Bill, I would like to draw the attention of the Hon'ble House to one salient fact. There are no figures or statistics available for us to know the extent of indebtedness of our agriculturists in our country. The first and fundamental duty of any Government before bringing this sort of a legislation would be to know the correct figures about the actual indebtedness of the agriculturists. Hitherto, fortunately or unfortunately, some relief was being given to the agriculturist under the Agriculturists Relief Act, reliefs such as the limitation and the instalment facility and also the agricultural implements were not attachable under that Act. I fail to understand why such a piece of legislation was brought without knowing exactly the figures and statictics about the agriculturists indebtedness. Provision has been made here for the debtor or the creditor to make an application to the court according to the pecuniary jurisdiction of the courts now in existence. Sir, one thing that pains me very much is that the debtors or creditors are deprived of their opportunities to get legal aid in proceedings under this Act before the

(SRI D. PARAMESWARAPPA)

Court of law. Sir, as you are aware, our agriculturists do not certainly know the implications of law and when procedings take place in any court on this Act, it is very essential that he should get the legal aid because many of the issues and many of the problems involve questions of law. He will not be able to know these implications of law. Under such circumstances, it is absolutely necessary that some sort of legal aid is made available to the poor agriculturists.

Sir, ours is an agricultural country and about 80 per cent of the people live on agriculture and their income varies according to their efforts, according to the size of the holdings, etc. Though the idea behind this measure is laudable, if we consider the clauses, it will be evident that the provisions of the Bill, instead of helping the agriculturist, will certainly be prejudicial to his interest. Sir, according to this Bill, the right to make an application either by a creditor or the debtor is only when his debts do not exceed 1,500 rupees. Then, the definition of the debtor is very vague in this Bill. The definition says that a debtor means an individual who is indebted, who holds lands used for agricultural purpose or has held such land at any time not more than thirty years, before 30th January 1940, which land has been transferred, whether under any instrument or not, and which transfer is in the nature of a mortgage, although not purporting to be so ;

> "who has been cultivating the land personally for the cultivating seasons in the two years immediately preceding the date of the coming into operation of this Act ;" etc., etc.,

Sir, debtor ordinarily means, any person who owes something to another person, financially or in any other respect. A certain procedure has been laid down for the adjudgment of debts under this Bill. Either the creditor or the debtor has got to make an application to the court having jurisdiction in a prescribed form and after filing the application, the court issues notice, calling upon either the creditor or the debtor to file the statement of debts and then the court is going to make enquiry into the applications and if the court feels that certain settlement is beneficial to the debtor, then it may settle the dispute between the creditor and the debtor and the court is going to certify the settlement and that settlement is binding on both the parties. That is the procedure laid down in clause 10 of the bill. This clause appears rather very strange for the reason that there may be some *bona fide* mistake as between the creditor or the debtor and in such circumstances if the application is belated then they will be shut out and cannot establish their claims, according to this clause.

Certain duties are cast upon the debtors and creditors under clause 17. They are expected to produce books of accounts. I do not know whether this would be practicable for all the agriculturists because they are ignorant. There is another act called the Money-tenders Act which would take care of this. In any case the bill is going to be referred to

the Select Committee and I do not wish to comment further on this bill. With regard to evaluation of property, the procedure laid down is defective. I hope the lacuna will be remedied.

†ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೆ, ಮೈಸೂರು ರಾಜ್ಯದಲ್ಲಿ ಸಾಲವಾಗಿ ಕೊಟ್ಟಿರತಕ್ಕ ವ್ಯವಸಾಯಗಾರರಿಗೆ ಪರಿಹಾರವನ್ನು ಕೊಡುವುದಕ್ಕಾಗಿ ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ಇಲ್ಲಿ ಮಂಡಿಸಿದ್ದಾರೆ. ಈ ಮಸೂದೆಯನ್ನು ನೋಡಿದ ಮೇಲೆ ನನಗಾದರೂ ಅನಿಸಿತು, ಸಾಲದ ಸೌಲಭ್ಯಗಳನ್ನು ಕೊಟ್ಟರತಕ್ಕ ರೈತರಿಗೆ ಯಾವ ವಿಧವಾದ ಪರಿಹಾರ ಇದರಿಂದ ಸಿಗುವುದಿಲ್ಲವಲ್ಲಾ ಎನ್ನುವುದು ಇದರಿಂದ ಕಾಣುತ್ತದೆ. ಈಗಿರತಕ್ಕ ಕಾನೂನುಗಳೆಲ್ಲವೆ ಅವುಗಳಲ್ಲಿ ಏನೊಂದು ಋಣಭಾದೆಗಾಗಿ ಪರಿಹಾರ ರೈತರಿಗೆ ಸಿಗುತ್ತಿತ್ತೊ ಆ ಪರಿಹಾರಕ್ಕಿಂತ ಹೆಚ್ಚಿಗೆ ಸಿಗುವುದಕ್ಕೆ ಅವಕಾಶ ವಿದ್ದುದು ಅಷ್ಟು ಕೂಡ ಇದರಿಂದ ಸಿಗುತ್ತಿಲ್ಲವೇನೋ ಎಂದು ನನಗನಿಸುತ್ತದೆ. ಇರತಕ್ಕ ಕಾನೂನುಗಳೆಲ್ಲವನ್ನೂ ಸಮನ್ವಯ ಮಾಡುವ ಕೆಲಸವಾಗುತ್ತಿದೆಯೇ ವಿನಾ ನಿಜವಾಗಿಯೂ ರೈತರು ಏನು ಸಹಾಯವನ್ನು ನಿರೀಕ್ಷಿಸುತ್ತಿದ್ದರೋ ಅದೊಂದನ್ನೂ ಈ ಮಸೂದೆಯಲ್ಲಿ ಅಳವಡಿಸಲಿಲ್ಲವಲ್ಲಾ ಎಂದು ನಾನು ವಿಷಾದದಿಂದ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ. 1938 ನೇ ಇಸವಿಯಲ್ಲಿ ಮದರಾಸು ಸ್ಟೇಟಿನಲ್ಲಿ ರೈತರಿಗೆ ಋಣಭಾದೆಯನ್ನು ಪರಿಹರಿಸುವುದರ ಸಲುವಾಗಿ ಆಗ ಅಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾ್ ಸಿ. ರಾಜಗೋಪಾಲಾಚಾರಿಯವರು ಒಂದು ಕಾನೂನನ್ನು ತಂದು ಬಹಳ ಒಳ್ಳೆಯ ಕೆಲಸ ಮಾಡಿದ್ದರು. 1937ಕ್ಕೆ ಹಿಂದೆ ರೈತರಿಗಾಗಿ ಏನು ಸಾಲವನ್ನು ಕೊಟ್ಟಿದ್ದರೋ ಅದನ್ನು ಕೊಡದೇ ಇರುವಂತೆ ಶಾಶ್ವತವಾದ ಕಾನೂನು ಮಾಡಿದ್ದರು. ಇದರಿಂದಾಗಿ ರೈತರು ಸಾಲವಾಗಿ 1937ರಲ್ಲಿ ಮತ್ತು ಅದಕ್ಕಿಂತ ಹಿಂದೆ ಏನು ತೆಗೆದುಕೊಂಡಿದ್ದರೋ ಆ ಸ್ಥಾಲವೆಲ್ಲ ವಜ ಆಯಿತು. 1937ನೇ ಇಸವಿಯಿಂದೀಚೆಗೆ ಯಾವ ರೈತರು ಸಾಲ ಪಡೆದು ಇದ್ದರೋ ಆ ಸಾಲಕ್ಕೆ ರದರಪ್ಪು ಬಡ್ಡಿಯಾಗಿದ್ದರೂ ಬಡ್ಡಿ, ಅಸಲು ಎರಡೂ ಕೂಡ ವಜಾ ಆಯಿತು. ಅಷ್ಟು ಸಹಾಯವನ್ನು ಮಾಡಿದ್ದರೂ ಅದು ಸಾಲದು, ನುವ್ಯವಸ್ಥಿತವಾಗಿಲ್ಲ ಎಂದು 1938 ನೇ ಇಸವಿಯ ಕಾನೂನಿಗೆ 41 ನೇ ಇಸವಿಯಲ್ಲಿ ತಿದ್ದುಪಡಿ ತರಿದು ಇದ್ದರು. ಅದರಂತೆ 1937 ನೇ ಇಸವಿಯವರೆಗೆ ಏನು ಹಣವನ್ನು ರೈತರು ಸಾಲವಾಗಿ ಪಡೆದಿದ್ದರೋ ಆ ಸಾಲವನ್ನು ಕೊಡದಂತೆ ರೈತರಿಗೆ ಒಂದು ರೀತಿಯಾಧ ಪರಿಹಾರ ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇಂತಹ ಒಂದು ವ್ಯವಸ್ಥೆಯನ್ನು ಕಾನೂನಿನಲ್ಲಿ ಮಾಡಿದುದರಿಂದ ನಿಜವಾಗಿಯೂ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತನ ಋಣಬಾಧೆ ಪರಿಹಾರವಾಗಲು ಅನುಕೂಲವಾಯಿತು. Rural Credit Survey Reportನ್ನು ನಾವು ನೋಡುವುದಾದರೆ ವರ್ಷ ವರ್ಷ ಸುಮಾರು 70-75 ಕೋಟಿಯಷ್ಟು ಹಣವನ್ನು ರೈತರು ಬಡ್ಡಿ ರೂಪದಲ್ಲಿ ತೆರುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ. ಇದರಿಂದ ರೈತರ ಋಣಭಾದೆಯನ್ನು ಎಷ್ಟು ಮಟ್ಟಿಗೆ ಪರಿಹಾರ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುವುದು ಅಗತ್ಯ. ಈ ಬಿಲ್ಲು ಹೇಗೊ ಸಂಯುಕ್ತ ಪರಿಶೀಲನಾ ಸಮಿತಿಗೆ ಹೋಗತಕ್ಕದ್ದಿರುವುದರಿಂದ, ಅದರ ಮೂಲಕ ಯಾವರೀತಿ ಉತ್ತಮ ಪರಿಹಾರವನ್ನು ತೋರಿಸಬಹುದು ಎನ್ನುವುದನ್ನು ನೋಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಸ್ವಾಮಿ, ರೈತರು ತಮ್ಮ ಜಮೀನನ್ನು ಒತ್ತೆಯಿಟ್ಟು ಸಾಲ ಪಡೆಯುತ್ತಾರೆ, ಭೋಗ್ಯ ಮಾಡಿ ಸಾಲ ಪಡೆಯುತ್ತಾರೆ. ಎರಡು ಸಾವಿರದಷ್ಟು ಸಾಲವನ್ನು ತೆಗೆದುಕೊಂಡು ಅದಕ್ಕಾಗಿ ಜಮೀನನ್ನು ಭೋಗ್ಯ ಮಾಡಿದ್ದಾರೆ, ಅಂತಹ ಸಾಲದಿಂದ ಅವನ ಜಮೀನಿನಿಂದ ಎರಡು ಸಾವಿರದಷ್ಟು ಉತ್ಪನ್ನವನ್ನು ಮಾಡುವುದಕ್ಕೆ ಸಾಧ್ಯವೇ? ಎರಡು ಸಾವಿರದಷ್ಟು ಸಾಲದ ಹಣವನ್ನು ಅವರುಗಳ ಜೀವನದ ಕಷ್ಟಗಳಿಂದಾಗಿ ವಾಪಸು ಕೊಡುವ ಹಾಗಿಲ್ಲ. ಹೀಗೆ ವರ್ಷ ವರ್ಷ ಸಾಲ ಪಡೆದ ಎರಡು ಸಾವಿರಕ್ಕೆ ಬಡ್ಡಿಯೇ ಎರಡು ಸಾವಿರದಷ್ಟಾಗುತ್ತದೆ. ಹೀಗಾದರೆ ಈ ರೈತರ ಋಣಭಾದೆಯನ್ನು ಎಷ್ಟು ಮಟ್ಟಿಗೆ ಪರಿಹಾರ ಮಾಡಬಹುದು ಎನ್ನುವ ಚಿತ್ರ ಇಲ್ಲದೆ. ಇದನ್ನು ಯೋಚನೆ ಮಾಡಬೇಕು. ರೈತನ ಋಣಭಾಧೆಯನ್ನು ನೀಗಿಸಲು ಸುವ್ಯವಸ್ಥಿತವಾದ ಯೋಜನೆಯನ್ನು ಹಾಕಲೇಬೇಕು. ಸರ್ಕಾರದ ಸಾಲಕ್ಕೆ ಹೆಚ್ಚಿನ ಬಡ್ಡಿ ಕೊಡುವಂತಾಗಬಾರದು. ಇದರೊಳಗೆ ಯಾವರೀತಿ ಸರಿಪಡಿಸಬಹುದು ಎನ್ನುವ ವ್ಯವಸ್ಥೆಯನ್ನು ಯೋಚನೆ ಮಾಡಬೇಕು. 1948ನೇ ಇಸವಿಯಲ್ಲ ಮದರಾಸು ಸರ್ಕಾರದಲ್ಲಿ ಒಂದು ತಿದ್ದುಪಡಿ ತಂದಿದ್ದರು. ಅದರಂತೆ ರೈತರು ಪಡೆದಿರುವ ಸಾಲದ ಅವಧಿ ಮುವ್ವತ್ತು ವರ್ಷಕ್ಕೆ ಮೇಲ್ಪಟ್ಟು ಇದ್ದರೆ ಅಂತಹವರ ಜಮೀನನ್ನೂ ತೆಗೆದುಕೊಂಡಿದ್ದರೆ ಅದನ್ನು ವಾಪಸು ಕೊಡಬಹುದು ಎಂದು ಅಂತಹ ಶಾಶ್ವತವಾದ ಪರಿಹಾರವನ್ನು ಕೊಡಲಾಗಿತ್ತು. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿಯೂ ಕೂಡ ರೈತರೂ ಸಾಲ ಪಡೆಯಲು ಭೋಗ್ಯ ಮಾಡಿ

(ಶ್ರೀ ಜಿ. ಎ. ಗೌಡ)

ವ್ಯವಸಾಯ ಮಾಡುತ್ತಿರುವ ಜಮೀನನ್ನು ಆ ಭೋಗ್ಯವನ್ನು ವಾಪಸು ಕೊಡುವವರೆಗೂ ರೈತ ಪಡೆಯುವುದಕ್ಕಾಗುವುದಿಲ್ಲ. ಇವೆಲ್ಲವನ್ನೂ ಪರಿಶೀಲನೆ ಮಾಡಿ ನೋಡಿ ಶಾಶ್ವತವಾದ ಪರಿಹಾರ ಕ್ರಮವನ್ನು ಇಲ್ಲಿಯೂ ಮಾಡುವುದು ಅವಶ್ಯಕ ಎಂದು ನನಗಾದರೂ ಅನಿಸುತ್ತದೆ. ಈ ಕಾನೂನನ್ನು ನೋಡಿದರೆ ಹೆಚ್ಚುಕಡಮೆ ಬೊಂಬಾಯಿ ಪ್ರದೇಶದ ಕಾನೂನನ್ನು ಕ್ರಮವಾಗಿ ಅನುಸರಿಸಿದ್ದೀರ ಎಂದು ಕಾಣುತ್ತದೆ. ಆದರೆ ಈ ಕಾನೂನುಮೂಲಕ ರೈತನ ಋಣಭಾಧೆ ನೀಗುವುದಕ್ಕೆ ನಿಗಾ ಕೊಟ್ಟಿರುವ ಹಾಗಿಲ್ಲ. ನಾನು ಈ ಮನೂದೆಯ ಪ್ರತಿಯೊಂದು ಪ್ರಾವಿಶನ್ ಕಡೆಗೂ ಹೋಗದೆ, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಅದಷ್ಟುಮಟ್ಟಿಗೆ ನಾನು ಒತ್ತಿಹೇಳುತ್ತಿರುವ ಅಂಶವನ್ನು ಪರಿಶೀಲನೆ ಮಾಡಿ, ರೈತನನ್ನು ಋಣಭಾದೆಯಿಂದ ತಪ್ಪಿಸಲು ಏನೇನು ಸಲಹೆಗಳಿವೆಯೋ ಅವುಗಳನ್ನು ಗಣನೆಗೆ ತೆಗೆದುಕೊಂಡು ಒಂದು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕು. ರೈತನನ್ನು ಋಣದಿಂದ ವಿಮುಕ್ತನನ್ನಾಗಿ ಮಾಡದಿದ್ದರೆ ಅವನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡಿರಬೇಕು. ಸಹಕಾರಸಂಘಗಳ ಮೂಲಕ ನಾವು ಸಹಾಯ ಮಾಡಿದರೂ ರೈತನನ್ನು ಸಾಲದಿಂದ ಪಾರುಮಾಡಲು ಸಾಧ್ಯವಾಗುತ್ತಾ ಇಲ್ಲ. ಆದ್ದರಿಂದ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು, ಸುಧಾರಿತವಾಗಬೇಕು ಎಂಬ ಬಯಕೆ ಇದ್ದರೆ, ಅದು ನಾಧನೆಯಾಗಬೇಕಾದರೆ, ಅವರನ್ನು ಋಣಭಾಧೆಯಿಂದ ತಪ್ಪಿಸತಕ್ಕಂಥ ಯೋಜನೆಯನ್ನು ಹುಡುಕಿ, ಅದನ್ನು ಕಾನೂನು ಮೂಲಕ ಬಲಾತ್ಕಾರವಾಗಿ ಜಾರಿಗೆ ತಂದು ಪರಿಹಾರ ದೊರಕಿಸಿ ಕೊಡಬೇಕೇ ಹೊರತು, ಇಲ್ಲದಿದ್ದರೆ ಅವರು ಒತ್ತೆ ಇಟ್ಟ ಜಮೀನನ್ನು ನೀವು ಏನು ಸಹಾಯ ಕೊಟ್ಟರೂ ವಾಪಸು ಪಡೆಯುವುದು ಅಸಾಧ್ಯ. ರೈತರು ಒತ್ತೆ ಇಟ್ಟ ಜಮೀನನ್ನು ಸಾಲಕೊಟ್ಟವರು ಯಾರಿಂದಲೋ ಉಳಿಮೆಮಾಡಿಸಿ ಅನುಭವಿಸುತ್ತಿದ್ದಾರೆ. ನೀವು ರೈತರ ಜಮೀನುಗಳನ್ನು ಸಾಲಗಾರರಿಂದ ಬಿಡಿಸಲು ಏನು ಕ್ರಮ ಹಾಕಿಕೊಂಡು ಹೊರಟಿದ್ದೀರೊ, ಅದು ಕಾರ್ಯಗತವಾಗುವುದಿಲ್ಲ. ಒತ್ತೆಇಟ್ಟರತಕ್ಕಂಥ ಜಮೀನಿನ ಸಂಬಂಧವಾಗಿ ರೈತರು ಎಷ್ಟು ದುಡ್ಡನ್ನು ಸಾಲದ ಬಗ್ಗೆ ಸಂದಾಯ ಮಾಡಿದ್ದರೂ, ಬಿಡಿಸಿಕೊಳ್ಳುವುದು ಕಷ್ಟ. ಒತ್ತೆ ತೆಗೆದುಕೊಂಡ ಸಾಹುಕಾರರಿಗೆ ರೈತನಿಂದ ಹಣ ಎಷ್ಟೋ ರೂಪದಲ್ಲಿ ಸಂದಾಯವಾಗಿ ಸಾಲ ಬೇಕಾಗಿದ್ದರೂ, ಎಲ್ಲರಿಗೂ ಗೊತ್ತಿರುವಂತೆ ಸಾಲ ಏನರ್ಜನೆಯಾಗುವುದೇ ಇಲ್ಲ. ಕಾನೂನು ಮಾಡಿ ಋಣದಿಂದ ವಿಮುಕ್ತರನ್ನಾಗಿ ಮಾಡಬೇಕು. ಇದಕ್ಕೆ ರಾಜ್ಯಾಂಗ ವಿರೋಧವಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ, ಮತ್ತು ರೈತರ ಹಿತದೃಷ್ಟಿಯಿಂದ ಇಂಥ ಕಾನೂನನ್ನು ಮಾಡಬೇಕು ಎಂದು ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕಾನೂನನ್ನು ನಾಲ್ಕಾರು ಭಾಗಗಳಲ್ಲಲ್ಲಿರುವ ವಿಧೇಯಕಗಳನ್ನು ಸಮನ್ವಯ ಮಾಡುವ ದೃಷ್ಟಿಯಿಂದ ತಂದರೆ, ನಿಜವಾಗಿಯೂ ರೈತರಿಗೆ ಯಾವರೀತಿ ಪರಿಹಾರವನ್ನೂ ಕೊಡುವುದಕ್ಕಾಗುವುದಿಲ್ಲ. ಮಾನ್ಯಮಂತ್ರಿಗಳು ಪರಿಣತರನ್ನು ಕನ್ಸಲ್ಟ್‌ಮಾಡಿ ಈ ಕಾನೂನು ಜೊತೆಗೆ ಇನ್ನೊಂದು ಕಾನೂನು ತಂದು ರೈತರಿಗೆ ಋಣದಿಂದ ಪರಿಹಾರ ಸಿಗುವಂತೆ ಮಾಡಬೇಕು. ರೈತನು ತಾನು ಸಾಲಕೊಟ್ಟು ತೀರಿಸಿದ್ದರೂ ಮುನ್ಸೀಫ್ ಕೋರ್ಟಿನಲ್ಲಿ ಅವನಿಗೆ ಯಾವ ವಿಧವಾದ ಪರಿಹಾರವೂ ಸಿಗುವುದಿಲ್ಲ. ಅವನಿಗೆ ಅಗತಕ್ಕಂಥ ಸುಲಗೆ ತಪ್ಪಬೇಕು. ಇದಕ್ಕೆ ಒಂದು ಸುವ್ಯವಸ್ಥಿತವಾದ ಏರ್ಪಾಟಾಗಲಿ ಎಂದು ತಿಳಿಸುತ್ತೇನೆ.

ಒಬ್ಬರೈತನ ಆಗ್ರಿಗೇಟ್ ಇನ್‌ಕಂ 5 ಸಾವಿರ ರೂಪಾಯಿ ಒಳಗಿದ್ದರೆ ಅವನಿಗೆ ಕಾಯಿದೆಯಲ್ಲರ ತಕ್ಕಂಥ ಅನುಕೂಲ ಸಿಗಬೇಕು. ಈಗ 3 ಸಾವಿರ ರೂಪಾಯಿ ಮೇಲಿದ್ದರೆ ಕಾಯಿದೆಯು ಒಂದು ಪ್ರಯೋಜನ ಸಿಗುವುದಿಲ್ಲ. ಇದು ನನ್ನ ದೃಷ್ಟಿಯಲ್ಲಿ ಬಹಳ ತಪ್ಪಾಗಿ ಹೋಗುತ್ತದೆ. ಒಬ್ಬರೈತನಿಗೆ 5 ಸಾವಿರ ರೂಪಾಯಿ ಮೇಲೆ ಆದಾಯವಿದ್ದರೆ ಯಾವಾಗ ಒಂದು ಪ್ರಯೋಜನ ಸಿಗಲಲ್ಲವೋ, ಆವಾಗ ಅವಿಭಕ್ತ ಕುಟುಂಬಕ್ಕೆ ಸೇರಿದವರಿಗೆ 3 ಸಾವಿರ ರೂಪಾಯಿ ಎಂದು ನಿಶ್ಚಿತ ಮಾಡಿರತಕ್ಕಂಥಾದ್ದು ಸರಿಯೆ ? ನಾನು ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಆಕ್ಟನ್ನೂ ನೋಡಿದೆ. ಆ ಕಾನೂನುಗಳನ್ನು ಅನುಸರಿಸಿ ರೈತನಿಗೆ 7 ಸಾವಿರ ರೂಪಾಯಿವರೆಗೆ ಆದಾಯವಿದ್ದರೂ, ಈ ಕಾನೂನಿನ ಸೌಲಭ್ಯ ಸಿಗುವಂತೆ ಮಾಡಬೇಕು. ಈ ಅಂಶವನ್ನು ಕಾನೂನಿನಲ್ಲಿ ಅಳವಡಿಸಿದರೆ ನಿಜವಾಗಿ ನೂಕ್ತವಾದ ಪರಿಹಾರ ರೈತರಿಗೆ ಸಿಗಬಹುದು. ಈ ಕಾನೂನಿನಿಂದ ರೈತನ ಋಣಭಾದೆ ಆದಷ್ಟು ಮಟ್ಟಿಗೆ ಹೋಗಬೇಕು. ಅಂಥ ಒಂದು ಯೋಜನೆಯನ್ನು ಅಳವಡಿಸಿಕೊಂಡು ಕಾನೂನು ಮಾಡಿ ಎಂದು ಮತ್ತೊಮ್ಮೆ ಹೇಳಿ, ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri RAMAKRISHNA HEGDE.—Sir, I have listened to the suggestions made by the Hon'ble Members carefully. Some of the Hon'ble Members have already suggested that this Bill may be referred to either a Select Committee or a Joint Select Committee. While, I do not agree with the opinion expressed by some of the Hon'ble Members that this will craeate further confusion and so on, I am inclined to accept the suggestion that this Bill may be referred to a Joint Select Committee. Because I am accepting the suggestion, I do not propose to make any speech at this juncture.

Mr. DEPUTY SPEAKER.—The question is:

"That the Mysore Agricultural Debtors' Relief Bill, 1962, be taken into consideration."

The motion was adopted.

Motion to refer to a Joint Select Committee.

Sri RAMAKRISHNA HEGDE.—Sir, I beg to move :

"That the Mysore Agricultural Debtors' Relief Bill, 1962, be referred to a Joint Select Committee consisting of a total number of 20 members, 15 from the Legislative Assembly and 5 from the Legislative Council, and that the concurrence of the Legislative Council be obtained therefor, and that the following members of this House shall be members of the Joint Select Committee, *viz.*—

Sriyuths : 1. K. Lakkappa
2. K. P. Revannasiddappa
3. S. Gopala Salenna
4. R. N. Lakshmipathi
5. Andanaiah
6. S. Subbiah Nayak
7. C. S. Hulkoti
8. G.Made Gowda
9. K. Shivalinge Gowda
10. R. S. Patil
11. C. M. Desai
12. A. Sharanappa
13. N. Huchmasthy Gowda
14. Smt. Rathnamma Madhava Rao
15. Smt. Vasanthalatha Mirjankar."

Mr. DEPUTY SPEAKER.—The question is:—

"That the Mysore Agricultural Debtors' Relief Bill, 1962, be referred to a Joint Select Committee consisting of a total number of 20 members, 15 from the Legislative Assembly and 5 from the Legislative Council, and that the concurrence of the Legislative Council be obtained therefor and that the following members of this House shall be members of the Joint Select Committee, *viz.*,

Sriyuths : 1. K. Lakkappa
2. K. P. Revannasiddappa
3. S. Gopala Salenna
4. R. N. Lakshmipathi
5. Andanaiah
6. S. Subbiah Nayak
7. C. S. Hulkoti
8. G. Made Gowda
9. K. Shivalinge Gowda
10. R. S. Patil
11. C. M. Desai
12. A. Sharanappa
13. N. Huchmasthy Gowda
14. Smt. Rathnamma Madhava Rao
15. Smt. Vasanthalatha Mirjankar."

The motion was adopted.

Sri H. R. KESHAVA MURTHY (Gandasi).—Have we no voice to oppose it and request to circulate it for public opinion?

Mr. DEPUTY SPEAKER.—Not at this stage.

Sri H. R. KESHAVA MURTHY.—We oppose and we pray that if should be circulated for public opinion.

Mr. DEPUTY SPEAKER.—It is passed already.

Under sub-rule (2) Rule 240 of the Rules of Procedure and Conduct of Business in the Mysore Legislative Assembly, I nominate the Minister in charge of the Department, *viz.*, the Minister for Co-operation and Minister for Law as Members of the Joint Select Committee.

Sri V. S. PATIL.—This Bill, according to the printed copy give to us, stands in the name of Sri B. Rachiah, Minister for Agricultre. You said that the Minister in charge of the Department would be the Member Whether Sri Rachiah is to be there or the person who pilote the Bill is to be there, should be clarified. Otherwise, they will go on fighting amonget themselves.

(*Laughter*)

Mr. DEPUTY SPEAKER.—The Hon'ble Minister for Co-operation is in charge of the Bill. The House will now rise and reassemble at 8-30 A.M. on Saturday, the 12th October 1963.

The House adjourned at Six of the Clock to meet again at Thirty Minutes past Eight of the Clock on Saturday, the 12th October 1963.

WD 1316—GPB—900—28-12-1963